


'ಬಂತೆ ಸ್ರೈ' ದೇವಾಲಯ

# ಈಶ್ವರಪುರದ ತ್ರಿಭುವನಮಹೇಶ್ವರ

## ಕಾಂಬೋಡಿಯಾದಲ್ಲಿನ ಪುರಾಣ ಪ್ರಸಿದ್ಧ ಶಿಲ್ಪಗಳ ಸುಕೋಮಲ ಕೆತ್ತನೆಗಳು

■ ಡಿ.ಜಿ. ಮಲ್ಲಿಕಾರ್ಜುನ



ಶಿಲೆಯಲ್ಲಿ ಜೀವತಳೆದಿರುವ ಅಪ್ಸರೆ

ಹತ್ತು ಮತ್ತು ಹನ್ನೊಂದನೇ ಶತಮಾನದಲ್ಲಿ ಚೋಳರ ಸಾಮ್ರಾಜ್ಯ ಉತ್ತುಂಗದಲ್ಲಿತ್ತು. ತಮ್ಮ ಸೇನಾಶಕ್ತಿ, ನೌಕಾಶಕ್ತಿ ಮತ್ತು ದೇವಾಲಯಗಳ ನಿರ್ಮಾಣದಲ್ಲಿ ಅವರು ಹೆಸರಾಗಿದ್ದರು. ದಕ್ಷಿಣ ಮತ್ತು ಪೂರ್ವ ಭಾರತವನ್ನಷ್ಟೇ ಅಲ್ಲದೆ ಅವರ ವಿಸ್ತಾರ, ವ್ಯಾಪಾರ ಹಾಗೂ ಸಾಂಸ್ಕೃತಿಕ ಪ್ರಭಾವ – ಮಲಯ, ಜಾವಾ, ಸುಮಾತ್ರಾ ಸೇರಿದಂತೆ ಆಗ್ನೇಯ ಏಷ್ಯಾ ಭಾಗಗಳಲ್ಲೆಲ್ಲಾ ಹರಡಿತ್ತು. ಚೋಳರಿಗೂ ಹಿಂದಿನವರಾದ ಪಲ್ಲವರಿಂದ ಈ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯು ನಡೆದುಕೊಂಡು ಬಂದಿತ್ತು.

ಬೃಹದೀಶ್ವರನಂತಹ ಬೃಹತ್ ನಿರ್ಮಾಣಗಳು ದಕ್ಷಿಣ ಭಾರತದಲ್ಲಿ ನಡೆಯುತ್ತಿರುವ ವೇಳೆಯಲ್ಲಿಯೇ ಅತ್ತ ಆಗ್ನೇಯ ಏಷ್ಯಾದ ಕಾಂಬೋಡಿಯಾದಲ್ಲಿಯೂ ದೇವಾಲಯಗಳ ನಿರ್ಮಾಣ ನಡೆಯುತ್ತಿತ್ತು. ಅಲ್ಲಿ ಖಮೇರ್ ಸಾಮ್ರಾಜ್ಯ ಪ್ರವರ್ಧಮಾನಕ್ಕೆ ಬಂದಿತ್ತು ಮತ್ತು ಅಂಕೋರ್ ಅವರ ರಾಜಧಾನಿಯಾಗಿತ್ತು.

ಕ್ರಿ.ಶ. 944ರಲ್ಲಿ, ಎರಡನೇ ರಾಜೇಂದ್ರವರ್ಮನ್ ಅಧಿಕಾರಕ್ಕೆ ಬಂದಾಗ, ರಾಜನ ಸಲಹೆಗಾರ ಅಥವಾ ಗುರು ಯಜ್ಞವರಾಹ ಮತ್ತು ಆತನ ತಮ್ಮ ವಿಷ್ಣುಕುಮಾರ ಅವರಿಗೆ ರಾಜಧಾನಿ ಯಶೋಧರಪುರ (ಅಂಕೋರ್)ದ ಹೊರವಲಯದಲ್ಲಿರುವ ಗ್ರಾಮೀಣ ಪ್ರದೇಶದಲ್ಲಿ ದೇವಾಲಯ ಸಂಕೀರ್ಣವನ್ನು ನಿರ್ಮಿಸಲು ಅನುಮತಿ ನೀಡಲಾಯಿತು. ಈ ಸ್ಥಳವನ್ನು ಈಶ್ವರಪುರ ಎಂದು ಕರೆಯಲಾಯಿತು.